7TH SEPTEMBER 1995

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಪುತ್ತೂರು ತಾಲ್ಲೂಕಿನಲ್ಲಿ ಕುಮಾರಧಾರಾ ಜಲ ವಿದ್ಯುತ್ ಯೋಜನೆ ಪ್ರಾರಂಭ

+ ಶ್ರೀ ಎಸ್. ಅಂಗಾರ (ಸುಳ್ಯ) : ಸಭಾಧ್ಯಕ್ಷರೆ, ಸುಳ್ಯ ವಿಧಾನಸಭಾ ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು ಈ ಕ್ಷೇತ್ರಕ್ಕೆ ಸಂಬಂಧಪಟ್ಟ ಪುತ್ತೂರು ತಾಲ್ಲೂಕಿನ ಗುಂತೂರು ಗ್ರಾಮದಲ್ಲಿ ಕುಮಾರಧಾರಾ ಜಲವಿದ್ಯುತ್ ಯೋಜನೆಯಲ್ಲಿ ಕುಮಾರಧಾರಾ ನದಿಗೆ ಅಣೆಕಟ್ಟು ಕಟ್ಟುವಂಥ ಪ್ರಾಥಮಿಕ ಕೆಲಸ ಕಾರ್ಯ ಪ್ರಾರಂಭಗೊಂಡಿದೆ. ಆದರೆ ಈ ಕಾರ್ಯದ ಬಗ್ಗೆ ಯಾವುದೇ ಜನಪ್ರತಿನಿಧಿಗಳಿಗೆ ಇರಲಿ ಅಥವಾ ಯಾವುದೇ ಜನಗಳಿಗೆ ಇರಲಿ ಯಾವುದೇ ಸ್ಪಷ್ಟವಾದಂಥ ಮಾಹಿತಿಯನ್ನು ನೀಡದ್ದೆ ಅಲ್ಲಿ ಈ ಕಾರ್ಯ ಪ್ರಾರಂಭವಾಗಿರುವುದರಿಂದ ಅಲ್ಲಿ ಸಾಕಷ್ಟು ರೈತಾಪಿ ಜನಗಳು ಮತ್ತು ಕೂಲಿಕಾರ್ಮಿಕರಲ್ಲಿ ಗೊಂದಲ ಉಂಟಾಗಿದೆ. ಆದರೆ ಈ ಯೋಜನೆ ಏನಿದೆ ಈ ಯೋಜನೆಯನ್ನು ಪ್ರಾರಂಭಿಸುವಾಗ ಏತಕ್ಕೆ ಜನಪ್ರತಿನಿಧಿಗಳು ಮತ್ತು ಜನಗಳ ಒಂದು ಗಮನಕ್ಕೆ ತರದೆ ಈಗಾಗಲೇ ಈ ಕಾಮಗಾರಿಯನ್ನು ಪ್ರಾರಂಭ ಮಾಡಿದರು ಎನ್ನತಕ್ಕದ್ದು ಒಂದು ವಿಚಾರ. ಅದೇರೀತಿ ಈ ಅಣೆಕಟ್ಟಿನಿಂದಾಗಿ ಎಷ್ಟು ವಿಸ್ತೀರ್ಣ ಸ್ಥಳ ಮುಳುಗಡೆಯಾಗುವುದು ಮತ್ತು ಎಷ್ಟು ಕುಟುಂಬಗಳಿಗೆ ತೊಂದರೆಯಾಗುವುದು ಎಂಬ ಬಗ್ಗೆ ಸ್ಪಷ್ಟವಾದಂಥ ವಿವರಗಳನ್ನು ನೀಡಬೇಕು. ಅದೇರೀತಿಯಲ್ಲಿ ಈ ಅಣೆಕಟ್ಟಿನಿಂದಾಗಿ ಈ ವಿಧಾನಸಭಾ ಕ್ಷೇತ್ರದಲ್ಲಿ ಗೊಂದಲ ಉಂಟಾದ ಕಾರಣ ಜನಗಳಿಗೆ ಸ್ಪಷ್ಟವಾದ ಮಾಹಿತಿಯನ್ನು ನೀಡಬೇಕು. ಅಕಸ್ಮಾತ್ ಈ ಬಗ್ಗೆ ಮಾಹಿತಿಯನ್ನು ನೀಡದೇ ಹೋದಲ್ಲಿ ಅಲ್ಲಿ ಗೊಂದಲಗಳು ಮತ್ತು ಗಲಭೆಗಳಿಗೆ ಸರ್ಕಾರವೇ ಆಸ್ಪದ ಕೊಡುವಂಥ ಕೆಲಸವನ್ನು ಮಾಡಿದಂತಾಗುವುದು. ಆದ್ದರಿಂದ ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಜನಪ್ರತಿನಿಧಿಗಳು ಮತ್ತು ಜನಗಳಿಗೆ ಈ ಯೋಜನೆಯ ಸ್ಪಷ್ಟವಾದ ವಿವರಗಳನ್ನು ಕೊಡಬೇಕು. ಮತ್ತೆ ಯಾವುದೇ ರೈತಾಪಿ ಜನಗಳಿಗೆ ತೊಂದರೆಯಾಗುವಂಥ ಯೋಜನೆಯನ್ನು ಮಾಡಬಾರದು ಎನ್ನುವಂಥ ವಿನಂತಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು : ಅವರು ಹೇಳಿದ್ದಾರಲ್ಲಾ, ಸಾಕು.

ಶ್ರೀ ಡಿ.ವಿ. ಸದಾನಂದ ಗೌಡ : ಸ್ವಲ್ಪ ಮಾಹಿತಿ ಕೊಡುವಂಥ ಅವಶ್ಯಕತೆ ಇದೆ. ಸರ್ಕಾರ ಹೇಗೆ ಕದ್ದುಮುಚ್ಚಿ ಈ ಕೆಲಸವನ್ನು ಮಾಡುತ್ತಿದೆ ಎಂದು ಹೇಳುವುದಕ್ಕೆ...

ಸಭಾಧ್ಯಕ್ಷರು : ಅದಕ್ಕೆ ಸಪರೇಟ್ ನೋಟಿಸ್ ಕೊಡಿ. ಜೀರೋ ಹವರ್ನಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ : ನಾವು ಇದಕ್ಕೆ ನೋಟೀಸ್ ಕೊಟ್ಟು ಸುಮಾರು 10-12 ದಿನಗಳು ಕಳೆಯಿತು. ಇನ್ನೂ ಕೂಡ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗಿಲ್ಲ. ನಮ್ಮ ಊರಿನಲ್ಲಿರುವಂಥ ರೈತಾಪಿವರ್ಗದ ಜನ ಈ ಸಂದರ್ಭದಲ್ಲಿ ಅದಕ್ಕೆ ಗೊಬ್ಬರ ಅದೆಲ್ಲಾ ಹಾಕಿ ಬೆಳೆ ಬೆಳೆಸಬೇಕು ಎಂದು ನಿಶ್ಚಯ ಮಾಡಿದ್ದಾರೆ ಅವರೆಲ್ಲಾ ಕಂಗಾಲಾಗಿದ್ದಾರೆ, ನಮ್ಮದೆಲ್ಲಾ ಮುಳುಗಡೆಯಾಗುತ್ತಿದೆ, ನಾವು ಏತಕ್ಕೆ ಕೃಷಿ ಮಾಡಬೇಕು ಅಲ್ಲಿ, ನಾವು ಕೃಷಿ ಮಾಡಬೇಕೋ ಬೇಡವೋ ಎನ್ನುವಂಥ ಗೊಂದಲದ ಹಂತದಲ್ಲಿರುವಂಥ ಸಂದರ್ಭದಲ್ಲಿ ನಾವು ರೈತಾಪಿ ಜನರ ಬಗ್ಗೆ ಏನಾದರೂ ಪ್ರಸ್ತಾಪ ಮಾಡಬೇಕಾಗಿದೆ. ನಾವು ಸರ್ಕಾರದಲ್ಲಿ ಕೇಳಿದೆವು. ತಾಲ್ಲೂಕು ಆಫೀಸಿನಲ್ಲಿ ಅದರ ಎದುರು ಸುಮಾರು ಎರಡು ಸಾವಿರ ಜನ ಸೇರಿ ಇದರ

ಮಾಹಿತಿ ಕೊಡಿ ಎಂದು ಕೇಳಿದರೆ ಅವರಿಗೆ ಗೊತ್ತಿಲ್ಲ, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೇಳಿದರೆ ಅವರಿಗೆ ಗೊತ್ತಿಲ್ಲ, ಜಿಲ್ಲಾ ಪಂಚಾಯತ್‌ನಲ್ಲಿ ಕೇಳಿದರೆ ಅವರಿಗೆ ಗೊತ್ತಿಲ್ಲ ಸರ್ಕಾರದ ಹತ್ತಿರ ಬರೆದು ಕೇಳಿದರೂ ಸರ್ಕಾರ ಅದನ್ನು ಗಮನ ಮಾಡುತ್ತಿಲ್ಲ.

ಅಧ್ಯಕ್ಷರು : ಈಗ ನೀವು ಹೇಳಿದ್ದೂ ಏನೂ ಗೊತ್ತಾಗಲಿಲ್ಲ ಅವರಿಗೆ. ನೀವು ಹೇಳಬೇಕು ಎನ್ನುವ ಚಪಲಕ್ಕೆ ಹೇಳುತ್ತಾ ಹೋಗುವುದಾದರೆ ದಿವಸವೆಲ್ಲಾ ಭಜನೆ ಮಾಡಿ ನನ್ನದೇನೂ ಅಭ್ಯಂತರ ಇಲ್ಲ, ಯಾವುದಾದರೂ ಪ್ರಸ್ತಾಪ ಮಾಡುವ ಆ ವಿಚಾರ ಸರ್ಕಾರದ ಗಮನಕ್ಕೆ ಬರಬೇಕು. ನಿಮಗೆ ಅವಕಾಶ ಕೊಡುವ ಉದ್ದೇಶ ಏನೆಂದರೆ ನೀವು ಏನು ವಿಚಾರ ಪ್ರಸ್ತಾಪ ಮಾಡುತ್ತಾ ಇದ್ದೀರಿ, ಏತಕ್ಕಾಗಿ ಪ್ರಸ್ತಾಪ ಮಾಡುತ್ತಾ ಇದ್ದೀರಿ ಎಂಬುದು ಮೊದಲು ನಿಮಗೆ ಗೊತ್ತಾಗಬೇಕು. ಅನಂತರ ಕೇಳತಕ್ಕಂಥವರಿಗೆ ಗೊತ್ತಾಗಬೇಕು, ಯಾರಿಗೂ ಗೊತ್ತಾಗದಹಾಗೆ ಸುಮ್ಮನೆ ಬಡಬಡ ಅಂತ ಮಾತನಾಡುತ್ತಿದ್ದರೆ ಪ್ರಯೋಜನ ಏನು? ದಯಮಾಡಿ ತಾವು ಕುಳಿತುಕೊಳ್ಳಿ ಎಂದು ನಿಮಿಷ. ಹೀಗೆ ಮಾಡಿದರೆ The significance of zero Hour is totally gone,

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ ನಮಗೆ ಅವಕಾಶ ಕೊಡುತ್ತಿದ್ದೀರಿ. ಅದರ ಬಗ್ಗೆ ಎರಡು ಮಾತಿಲ್ಲ, ಹೊಸಬರಿಗೆ ಅವಕಾಶ ಕೊಡಬೇಕು ಎಂದು ತಾವು ಹೆಚ್ಚು ಗಮನ ಕೊಡುತ್ತಿದ್ದೀರಿ. ಅದರ ಬಗ್ಗೆ ಸಂಪೂರ್ಣ ನಮ್ಮ ಅಭಿನಂದನೆಗಳು ತಮಗೆ. ಇದರೇ ಏನಾಗಿದೆ ಅಧ್ಯಕ್ಷರೇ, ಅನೇಕ ಪ್ರಮುಖ ವಿಷಯಗಳು ಪ್ರಸ್ತಾಪ ಮಾಡುವುದಕ್ಕೆ ಆಗದೇ ಇದ್ದಾಗ ಜೀರೋ ಹವರ್‌ನಲ್ಲಿ ಪ್ರಸ್ತಾಪ ಮಾಡುತ್ತಾರೆ. ಸರ್ಕಾರ ಅದನ್ನು ಕೇಳಿ ತಕ್ಷಣ ಉತ್ತರ ಕೊಡುವುದಾದರೆ ಕೊಡಲಿ. ಇಲ್ಲದಿದ್ದರೆ ಆಮೇಲಾದರೂ ಕೊಡಲಿ. ಗಮನ ಕೊಡುತ್ತೇವೆ ಎಂದು ಹೇಳಲಿ.

ಅಧ್ಯಕ್ಷರು : ವಿರೋಧಪಕ್ಷದ ನಾಯಕರೇ, ಕೇಳಿ ದಯಮಾಡಿ. ಡೆಪ್ಯೂಟಿ ಚೀಫ್ ಮಿನಿಸ್ಟರ್ ಇಲ್ಲಿ ಕೂತಿದ್ದಾರೆ. ಅವರು ಆಗಿನಿಂದ ಏನು ವಿಷಯ ಏನು ವಿಷಯ ಯಾವುದು ಇದು, ನನ್ನ ಹತ್ತಿರ ಏನು ಇನ್ಫರ್ಮೇಷನ್ ಇಲ್ಲವಲ್ಲಾ ಎಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ನನ್ನ ಸಿಬ್ಬಂದಿ ಮುಖಾಂತರ ಅವರಿಗೆ ಹೇಳಿ ಕಳುಹಿಸುತ್ತಿದ್ದೇನೆ. ಇಲ್ಲ, ಇದು ಜೀರೋ ಹವರ್‌ನಲ್ಲಿ ಮೆಂಬರ್ಸ ಬಂದು ನನ್ನ ಪರ್ಮಿಷನ್ ತೆಗೆದುಕೊಂಡು ರೈಸ್ ಮಾಡುತ್ತಿದ್ದಾರೆ ಅವರು ಮೆನ್ಷನ್ ಮಾಡಲಿ. ಅವರು ಅಂಗಾರರು ಮೆನ್ಷನ್ ಮಾಡಿದ್ದಾರೆ. ಅವರು ಕೇಳುತ್ತಿದ್ದಾರೆ. ಅಷ್ಟರಲ್ಲಿ ಮತ್ತೆ ಸದಾನಂದ ಗೌಡರು ಹೇಳುತ್ತಿದ್ದಾರೆ. ಹೀಗಾದರೆ ಏನೂ ಹೇಳುವುದಕ್ಕೇ ಆಗುವುದಿಲ್ಲ, ನಾನು ಏನು ಹೇಳುತ್ತೇನೆ ಅಂದರೇ ತಕರಾರು ಮಾಡುವುದಕ್ಕೆ ಜೀರೋ ಹವರ್ ಉಪಯೋಗಿಸಬೇಡಿ. ಬೇರೆ ಹವರ್ಸ ಇದ್ದಾವೆ. ರೂಲ್ಸ್‌ನಲ್ಲಿ ಬೇರೆ ಅವಕಾಶ ಇದೆ. ರೈಸ್ ಮಾಡುವುದಕ್ಕೆ ಮಾತ್ರ ನೀವು ಅವಕಾಶ ಉಪಯೋಗಿಸಿಕೊಳ್ಳಿ ಅಂದರೆ ನೀವು ಗಧಾಪ್ರಹಾರ ಏಲ್ಲಾ ಸಂದರ್ಭದಲ್ಲೂ ಮಾಡಿದರೆ ಏನು ಮಾಡುವುದಕ್ಕಾಗುತ್ತದೆ ಅವರು? ಯಾರು ಸರ್ಕಾರದಲ್ಲಿದ್ದರೂ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ತಾವು ಕೆಲವು ಸದಸ್ಯರಿಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೊಡುತ್ತೀರಿ. ಅವರು ಅದನ್ನು ಪ್ರಸ್ತಾಪ ಮಾಡಲಿ. ಆ ಪ್ರಸ್ತಾಪ ಮಾಡುತ್ತಾ ಇರತಕ್ಕ ಸಂದರ್ಭದಲ್ಲಿ ಯಾವುದರ ಬಗ್ಗೆ ಪ್ರಸ್ತಾವ ಮಾಡಬೇಕು ಎಂದು ಹೇಳುವುದನ್ನು ಲಿಖಿತ ಮೂಲಕ ಒಂದು ಪತ್ರವನ್ನಾದರೂ ಕೊಡಲಿ. ಆ ಪತ್ರ ಬಂದಕೂಡಲೇ ನಮಗೆ ಅದರ ಕಾಪಿ ಕೊಡಿ. ಅದನ್ನಾದರು ಮಾಡಿ. ಇಲ್ಲದ ಇದ್ದರೆ ಅವರು ಎತ್ತುತ್ತಾ ಇರುವ

ವಿಚಾರಕ್ಕೆ ಸರ್ಕಾರದಿಂದ ಒಂದು ಉತ್ತರ ಬೇಕಲ್ಲಾ ಸರ್ಕಾರದ ವತಿಯಿಂದ ಉತ್ತರ ಸಿಗದೇ ಇರತಕ್ಕ ಪರಿಸ್ಥಿತಿ ನಿರ್ಮಾಣ ಮಾಡಿದರೆ ನೀವು ಕೇಳಿರತಕ್ಕದ್ದು ಕಡತದಲ್ಲಿ ಹೋಗುತ್ತದೆ, ಕೆಲವು ಸಾರಿ ಉತ್ತರವೂ ಬರುವುದಿಲ್ಲ. ಯಾವುದಾನ್ನಾದರೂ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ಕೊಟ್ಟಂಥ ಸಂದರ್ಭದಲ್ಲಿ ಲಿಖಿತ ಮೂಲಕ ಕೊಡಿ .ಆಗ ಸರ್ಕಾರಕ್ಕೂ ಒಂದು ಪ್ರತಿ ಬರುತ್ತದೆ. ಈ ಕೆಲಸ ದಯವಿಟ್ಟು ಮಾಡಿ

ಶ್ರೀ ಡಿ.ವಿ. ಸದಾನಂದ ಗೌಡ : ಅಧ್ಯಕ್ಷರೇ, ಒಂದು ಸ್ಪಷ್ಟೀಕರಣವನ್ನು ನಾನು ಬಯಸುತ್ತೇನೆ. ಏಕೆಂದರೆ ಈ ಜಲ ವಿದ್ಯುತ್ ಯೋಜನೆ ಬಗ್ಗೆ ಎರಡು ಬಾರಿ ತಮ್ಮನ್ನು ಭೇಟಿ ಮಾಡಿ ತಮಗೆ ಬರಹದ ಮೂಲಕ ಕೊಟ್ಟಂಥ ಸಂಗತಿ ತಮಗೆ ಗೊತ್ತಿದೆ. ಈಗ ಏನಾಗಿದೆ ಎಂದರೆ ಬರಹದ ಮೂಲಕ ಕೊಟ್ಟ ಹದಿನೈದು ದಿನಗಳ ನಂತರವೂ ಅಲ್ಲಿ ಈಗಾಗಲೇ ಕಾರ್ಯಕ್ರಮ ಆಗುತ್ತಾ ಇದೆ. ಅಲ್ಲಿ ಕಾಮಗಾರಿಗಳು ನಡೆಯುತ್ತಾ ಇದೆ. ರೈತಾಪಿ ವರ್ಗದ ಜನ ತೊಂದರೆಗೆ ಒಳಗಾಗಿದ್ದಾರೆ ಎಂಬ ಬಗ್ಗೆ ನಾನು ವೈಯಕ್ತಿಕ ಪತ್ರ ಬರೆದಿದ್ದೇನೆ. ಜಿಲ್ಲಾಧಿಕಾರಿಗಳನ್ನು ಕೇಳಿದರೂ ಮಾಹಿತಿ ಸಿಗುತ್ತಿಲ್ಲ. ಒಂದು ಶಾಸಕನಾಗಿ ಆ ಕ್ಷೇತ್ರದ ಜನತೆಗೆ ಇವತ್ತು ಕೃಷಿ ಮಾಡಬೇಕೋ ಬೇಡವೋ ಆ ಕ್ಲುಪ್ತ ಸಮಯದಲ್ಲಿ ಎಂಬ ಜಿಜ್ಞಾಸೆ ಬಂದಾಗ ಇದಕ್ಕೆ ನಮಗೆ ಉತ್ತರ ಸಿಗುತ್ತಿಲ್ಲ ಅಂದರೆ ನಾವು ಏತಕ್ಕೆ ಶಾಸಕರಾಗಿರಬೇಕು ಆ ಕ್ಷೇತ್ರದಲ್ಲಿ?

ಅಧ್ಯಕ್ಷರು : ಅವರು ಏನು ಹೇಳುತ್ತಿದ್ದಾರೆ ಎಂಬುದು ಗೊತ್ತಾಗಲೇ ಇಲ್ಲ. ಉಳಿದಿದ್ದೆಲ್ಲಾ ಭಾಷಣ ಮಾಡುತ್ತಿದ್ದಾರೆ. ನಾನು ಅದನ್ನೇ ಹೇಳುತ್ತಿದ್ದೇನೆ, ನಾನು ಅವರಿಗೆ ಸಹಕಾರ ಕೊಡುವುದಕ್ಕೆ ತಯಾರಿದ್ದರೂ ತೆಗೆದುಕೊಳ್ಳುವುದಕ್ಕೆ ಅವರು ತಯಾರಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ : ಪ್ರಾರಂಭಿಕ ಹಂತದಲ್ಲೇ ಕುಮಾರಧಾರಾ ಜಲ ವಿದ್ಯುತ್ ಯೋಜನೆ ಎಂದು ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು : ಈಗ ನೀವು ಪ್ರಸ್ತಾಪ ಮಾಡಿದಿರಲ್ಲಾ ಸರ್ಕಾರದ ಗಮನಕ್ಕೆ ಬಂದಿದೆ ಬಿಡಿ. ಪುಟ್ಟಣ್ಣಯ್ಯನವರೇ, ತಾವು ಯಾವದೋ ಒಂದು ವಿಚಾರ ಪ್ರಸ್ತಾಪ ಮಾಡಬೇಕು ಎಂದು ಹೇಳಿದಿರಲ್ಲಾ ಸರಿಯಾಗಿ ಪ್ರಸ್ತಾಪ ಮಾಡದೇ ಹೋದರೆ ಅದರ ಪರಿಣಾಮ ಇಷ್ಟೇ ಆಗುರುದು ನಾನೇನೂ ಮಾಡುವುದಕ್ಕಾಗುವುದಿಲ್ಲ. It becomes a problem for me.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸಭಾಧ್ಯಕ್ಷರೇ ತಮ್ಮ ಮೂಲಕ ಸರ್ಕಾರಕ್ಕೆ ಬಹಳ ಅತ್ಯಂತ ಜವಾಬ್ದಾರಿ ವಿಷಯವನ್ನು ಎರಡೂವರೆ ಮೂರು ತಿಂಗಳಿಂದ ಅಧ್ಯಕ್ಷರು : ಕೃಷ್ಣಮೂರ್ತಿಯವರೇ, ಒಂದು ನಿಮಿಷ ಇರಿ. ಮುಖ್ಯಮಂತ್ರಿಗಳಿಲ್ಲ ಅವರ ಪರವಾಗಿ ಉಪಮುಖ್ಯಮಂತ್ರಿಗಳಿದ್ದಾರೆ. ಆಮೇಲೆ ಅವರ ಹತ್ತಿರ ಬಂದು ಮಾತನಾಡಿಕೊಳ್ಳಿ. ನಿಮ್ಮ ಚೀಟಿಗಳೂ ಏನಾದರೂ ಇದ್ದರೆ ಆಮೇಲೆ ಕೊಡಿ. ನಾನು ಅಧಿಕಾರರ ಸ್ವೀಕಾರ ಮಾಡಿದ ಮೊದಲನೇ ದಿವಸವೇ ಈ ಮಾತನ್ನು ಹೇಳಿದೆ. ದಯಮಾಡಿ ಸದನ ನಡೆಯುವಾಗ ಸದಸ್ಯರು ಬಂದು ಮಂತ್ರಿಗಳಿಗೆ ತೊಂದರೆ ಕೊಡಬೇಡಿ ಎಂದು. ಪ್ರಶ್ನೋತ್ತರ ವೇಳೆಯಲ್ಲಿ ಮಂತ್ರಿಗಳ ಪಕ್ಕ ಬಂದು ಕುಳಿತುಕೊಳ್ಳುತ್ತಾರೆ. ಇದರಿಂದ ನನಗೆ ತೊಂದರೆಯಾಗಿದೆ. ಪುಟ್ಟಣ್ಣಯ್ಯನವರೇ, ತಾವು ಮಾತನಾಡಿ.